19.	ಮಧುಗಿರಿ–ಪಾವಗಡ		38.9
20.	ಚಿಕ್ಕೋಡಿ–(ಎನ್.ಹೆಚ್.4 ಕ್ರಾಸ್ ನಿಪ್ಪಾಣಿ		23.9

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (445)262
ಮಾನ್ಯ ಸದಸ್ಯರ ಹೆಸರು : ಶ್ರೀ ಸಿದ್ದು ಸವದಿ
ಉತ್ತರಿಸುವ ಸಚಿವರು : (ಶ್ರೀ.ಜಿ.ಜನಾರ್ಧನರೆಡ್ಡಿ)
: ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು

ಅ) ತೇರದಾಳ ಮತ ಕ್ಷೇತ್ರದಲ್ಲಿ ಅಲ್ಲಮ ಪ್ರಭು ದೇವಸ್ಥಾನ–ತೇರದಾಳ ವೆಂಕಟರಮಣ ದೇವಸ್ಥಾನ ಕಲ್ಲಳ್ಳಿ, ಮಹಾಲಿಂಗೇಶ್ವರ ದೇವಸ್ಥಾನ ಮಹಾಲಿಂಗಪೂರ, ಈ ರೀತಿ ಮೂರು ಐತಿಹಾಸಿಕ ಮತ್ತು ಪುರಾತನ ದೇವಸ್ಥಾನಗಳಿದ್ದು, ವರ್ಷವಿಡೀ ಬರುವ ಪ್ರವಾಸಿಗರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗುವುದೇ;

ತೇರದಾಳದಲ್ಲಿರುವ ಪ್ರವಾಸಿ ಆಕರ್ಷಣೆಗಳಾದ ಪುರಾತನ ದೇವಾಲಯಗಳ ಬಳಿ ಮೂಲಭೂತ ಸೌಲಭ್ಯ ಒದಗಿಸಲು ಇಲಾಖೆಯಿಂದ ಕ್ರಮ ಕೈಗೊಳ್ಳಲಾಗಿದೆ. ಇಲ್ಲಿ ಒಂದು ವಸತಿ ಸೌಕರ್ಯ ನಿರ್ಮಿಸಲು ರೂ.20 ಲಕ್ಷಗಳು ಮಂಜೂರಾಗಿದ್ದು ಇದನ್ನು ಜಿಲ್ಲಾಧಿಕಾರಿಗಳು, ಬಾಗಲಕೋಟೆ ಇವರಿಗೆ ಬಿಡುಗಡೆ ಮಾಡಲಾಗುತ್ತಿದೆ.

ಆ) 2007–08ರಲ್ಲಿ ತೇರದಾಳ ಅಲ್ಲಮಪ್ರಭು ದೇವರ ದೇವಸ್ಥಾನದ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗೆ ರೂ.35.00ಲಕ್ಷ ರೂಪಾಯಿಯ ಕ್ರಿಯಾ ಯೋಜನೆ ತಯಾರಿಸಿ ಯೋಜನೆಯನ್ನು ಕೈಬಿಡಲು ಕಾರಣಗಳೇನು;

2007–08ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಈ ಬಗ್ಗೆ ಪ್ರಸ್ತಾಪ ಇರಲಿಲ್ಲ.

ಇ) 2005 ರಿಂದ ಇಲ್ಲಿಯವರೆಗೆ ಇಲಾಖೆಯಿಂದ ಬಾಗಲಕೋಟೆ ಜಿಲ್ಲೆಯ ಪ್ರವಾಸಿ ಕೇಂದ್ರಗಳನ್ನು ಅಭಿವೃದ್ಧಿಪಡಿಸಲು ಖರ್ಚಾದ ಹಣವೆಷ್ಟು(ಸಂಪೂರ್ಣ ವಿವರ ಒದಗಿಸುವುದು)?

ಬಾಗಲಕೋಟೆ ಜಿಲ್ಲೆಯ ಈ ಕೆಳಕಂಡ ಪ್ರವಾಸಿ ಕೇಂದ್ರಗಳನ್ನು ಅಭಿವೃದ್ಧಿ ಪಡಿಸಲು 2005 ರಿಂದ ಈವರೆಗೆ ವೆಚ್ಚ ಮಾಡಿದ ವಿವರಗಳು ಹೀಗಿವೆ.

1. ಬಾದಾಮಿಯ ಹೋಟೆಲ್ ಮಯೂರ ಚಾಲುಕ್ಯ ಉನ್ನತೀಕರಣ – ರೂ.68.06ಲಕ್ಷಗಳು
2. ಅಗಸ್ತ್ಯ ತೀರ್ಥದ ಬಳಿ ಪ್ರವಾಸಿ ಸೌಲಭ್ಯಗಳ ಅಭಿವೃದ್ಧಿ ರೂ.30.34ಲಕ್ಷಗಳು

3. ಮಹಾಕೂಟದಲ್ಲಿ ಪ್ರವಾಸಿ ಸೌಲಭ್ಯಗಳಿಗಾಗಿ ರೂ.10.62ಲಕ್ಷಗಳು
4. ಬಾದಾಮಿಯ ಗುಹೆಗಳಿಗೆ ಮುಖ್ಯ ರಸ್ತೆಯಿಂದ ಇರುವ ಕೂಡು ರಸ್ತೆ ಅಭಿವೃದ್ಧಿಪಡಿಸಲು – ರೂ.45.00 ಲಕ್ಷಗಳು
5. ಐಹೊಳೆಯಲ್ಲಿರುವ ಮಯೂರ ಯಾತ್ರಿ ನಿವಾಸದಲ್ಲಿ ಉಪಾಹಾರ ಗೃಹ ಉನ್ನತೀಕರಿಸಲು – ರೂ.100.00ಲಕ್ಷಗಳು
6. ಪಟ್ಟದ ಕಲ್ಲು ಬಳಿ ಪ್ರವಾಸಿ ಸೌಲಭ್ಯಗಳಗಾಗಿ ಜಮೀನು ಖರೀದಿಸಲು ರೂ.100.00 ಲಕ್ಷೆಗಳು
7. ಬಾದಾಮಿಯಲ್ಲಿ ಮಾನವ ವಿಕಾಸ ಪಾರ್ಕ್ ನಿರ್ಮಾಣಕ್ಕಾಗಿ ರೂ.30.00 ಲಕ್ಷಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (446)263
ಸದಸ್ಯರ ಹೆಸರು : ಶ್ರೀ ಸಿದ್ದು ಸವದಿ
ಉತ್ತರಿಸುವ ಸಚಿವರು : (ಶ್ರೀ.ಆರ್.ಅಶೋಕ್)
: ಮಾನ್ಯ ಸಾರಿಗೆ ಸಚಿವರು

ಅ) ತೇರದಾಳ ಮತಕ್ಷೇತ್ರದಲ್ಲಿ ನಾಲ್ಕು ಬಸ್ ನಿಲ್ದಾಣಗಳಿದ್ದು, ಅವು ಸಂಪೂರ್ಣ ಹಾಳಾಗಿದ್ದು ದುರಸ್ತಿ ಕಾರ್ಯವನ್ನು ಎಂದಿನಿಂದ ತೆಗೆದುಕೊಳ್ಳಲಾಗುವುದು;

ತೇರದಾಳ ಮತಕ್ಷೇತ್ರದಲ್ಲಿ ಬನಹಟ್ಟಿ, ರಬಕವಿ, .ತೇರದಾಳ ಮತ್ತು ಮಹಾಲಿಂಗಪುರ ಬಸ್‌ನಿಲ್ದಾಣಗಳಿದ್ದು ಅವುಗಳ ದುರಸ್ತಿ ಕಾರ್ಯಗಳನ್ನು ಸಂಸ್ಥೆಯ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಹಂತಹಂತವಾಗಿ ಆದ್ಯತೆ ಮೇರೆಗೆ ಕೈಗೊಳ್ಳಲಾಗುವುದು. ಈಗಾಗಲೇ ರಬಕವಿ, ಬನಹಟ್ಟಿ ಹಾಗೂ ತೇರದಾಳ ಬಸ್ ನಿಲ್ದಾಣಗಳ ಆವರಣಕ್ಕೆ ಡಾಂಬರೀಕರಣ ಅಳವಡಿಸಲು ಅಂದಾಜು ಪಟ್ಟಿ ಮಂಜೂರಾಗಿದ್ದು ಟೆಂಡರ್ ಮುಖಾಂತರ ಗುತ್ತಿಗೆದಾರರನ್ನು ನೇಮಿಸಲಾಗಿದೆ. ಮಳೆಗಾಲದ ನಂತರ ಡಾಂಬರೀಕರಣ ಕೆಲಸ ಕೈಗೊಳ್ಳಲಾಗುವುದು.

ಆ) ತೇರದಾಳ ನಗರದಲ್ಲಿ ಬಸ್ ನಿಲ್ದಾಣದ ಚಾವಣಿ ಕುಸಿದು ಬಿದ್ದು 4 ವರ್ಷಗಳಾದರೂ ದುರಸ್ತಿ ಮಾಡದಿರಲು ಕಾರಣಗಳೇನು; ದುರಸ್ತಿ ಕಾರ್ಯವನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ತೇರದಾಳ ಬಸ್ ನಿಲ್ದಾಣದ ಉಪಹಾರ ಗೃಹ ಭಾಗದ ಛಾವಣಿಯು ಮಾತ್ರ ಕುಸಿದಿದ್ದು ಸಂಸ್ಥೆಯ ಆರ್ಥಿಕ ಮುಗ್ಗಟ್ಟಿನಿಂದ ಸದರಿ ಕೆಲಸವನ್ನು ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ. ಪ್ರಸ್ತುತ ಕಟ್ಟಡವನ್ನು ಸಧೃಡಗೊಳಿಸುವುದರೊಂದಿಗೆ ಛಾವಣಿಯನ್ನು ಮರು ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗುವುದು.